सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಭಾರತದ ರಾಷ್ಟ್ರ ಲಾಂಛನ (ಅನುಚಿತ ಬಳಕೆ ನಿಷೇಧ) ಅಧಿನಿಯಮ, 2005

(2005ರ ಅಧಿನಿಯಮ ಸಂಖ್ಯೆ 50)

[25ನೇ ಏಪ್ರಿಲ್, 2011 ರಂದು ಜಾರಿಯಲ್ಲಿದ್ದಂತೆ]

# THE STATE EMBLEM OF INDIA (PROHIBITION OF IMPROPER USE) ACT, 2005

(Act No. 50 of 2005)

[As on 25th April, 2011]

# ಮುನ್ನುಡಿ

25.04.2011 ರಂದು ಜಾರಿಯಲ್ಲಿದ್ದಂತೆ, ದಿ ಸ್ಟೇಟ್ ಎಂಬ್ಲಮ್ ಆಫ್ ಇಂಡಿಯಾ (ಪ್ರೋಹಿಬಿಷನ್ ಆಫ್ ಇಂಪ್ರಾಪರ್ ಯೂಸ್) ಆ್ಯಕ್ಟ್, 2005 (2005ರ 50) – ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು 25.04.2011ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ,45ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 68 ರಿಂದ 72ರ ವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

**ವಿ.ಕೆ. ಭಸೀನ್**
ಕಾರ್ಯದರ್ಶಿ
ಭಾರತ ಸರ್ಕಾರ.

ನವದೆಹಲಿ
ದಿನಾಂಕ:

# PREFACE

This edition of the State Emblem of India (Prohibition of Improper Use) Act, 2005 (50 of 2005) as on the 25.04.2011 contains the authoritative text of that Act in Kannada which was published in the Gazette of India Extraordinary, Part IX, Section 1, No.1, Vol. 45, dated . 25.04.2011 on pages 68 to 72.

This Kannada text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

**V.K. BHASIN**
Secretary,
Government of India.

New Delhi
Date :

## ಭಾರತದ ರಾಷ್ಟ್ರ ಲಾಂಛನ (ಅನುಚಿತ ಬಳಕೆ ನಿಷೇಧ) ಅಧಿನಿಯಮ, 2005

### ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:** **ಪುಟಗಳು**


1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ 1
2. ಪರಿಭಾಷೆಗಳು 1
3. ಲಾಂಛನದ ಅನುಚಿತ ಬಳಕೆಯ ನಿಷೇಧ 2
4. ಅಕ್ರಮ ಲಾಭಕ್ಕಾಗಿ ಲಾಂಛನದ ಬಳಕೆಯ ನಿಷೇಧ 2
5. ಕೆಲವು ಕಂಪನಿ, ಮುಂತಾದವುಗಳ ನೋಂದಣಿ ನಿಷೇಧ 2
6. ಲಾಂಛನದ ಬಳಕೆಯನ್ನು ವಿನಿಯಮಿಸಲು ಕೇಂದ್ರ ಸರ್ಕಾರದ ಸಾಮಾನ್ಯ ಅಧಿಕಾರಗಳು 3
7. ದಂಡನೆ 4
8. ಪ್ರಾಸಿಕ್ಯೂಷನ್ ಹೂಡಲು ಪೂರ್ವಮಂಜೂರಾತಿ 4
9. ಉಳಿಸುವಿಕೆಗಳು 4
10. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು 4
11. ನಿಯಮಗಳನ್ನು ರಚಿಸಲು ಅಧಿಕಾರ 4

ಅನುಸೂಚಿ. 6

# ಭಾರತದ ರಾಷ್ಟ್ರ ಲಾಂಛನ (ಅನುಚಿತ ಬಳಕೆ ನಿಷೇಧ) ಅಧಿನಿಯಮ, 2005
## (2005ರ ಅಧಿನಿಯಮ ಸಂಖ್ಯೆ 50)

**[20ನೇ ಡಿಸೆಂಬರ್ 2005]**

ವೃತ್ತೀಯ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಭಾರತದ ಲಾಂಛನದ ಅನುಚಿತ ಬಳಕೆಯನ್ನು ನಿಷೇಧಿಸುವ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಭಾರತದ ರಾಷ್ಟ್ರ ಲಾಂಛನ (ಅನುಚಿತ ಬಳಕೆ ನಿಷೇಧ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಭಾರತದ ಹೊರಗಿರುವ ಭಾರತದ ನಾಗರಿಕರಿಗೂ ಸಹ ಅನ್ವಯವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಕ್ಷಮ ಪ್ರಾಧಿಕಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ಕಂಪನಿ, ಫರ್ಮ್, ವ್ಯಕ್ತಿಗಳ ಇತರ ನಿಕಾಯವನ್ನು ಅಥವಾ ಯಾವುದೇ ವ್ಯಾಪಾರ ಚಿಹ್ನೆ ಅಥವಾ ವಿನ್ಯಾಸವನ್ನು ನೋಂದಾಯಿಸುವ ಅಥವಾ ಪೇಟೆಂಟ್ ಮಂಜೂರು ಮಾಡುವ ಯಾವುದೇ ಸಕ್ಷಮ ಪ್ರಾಧಿಕಾರ;

(ಬಿ) "ಲಾಂಛನ" ಎಂದರೆ ಸರ್ಕಾರದ ಅಧಿಕೃತ ಮುದ್ರೆಯಾಗಿ ಬಳಸುವುದಕ್ಕೆ ಅನುಸೂಚಿಯಲ್ಲಿ ವಿವರಿಸಲಾದ ಮತ್ತು ನಿರ್ದಿಷ್ಟಪಡಿಸಲಾದ ಭಾರತದ ರಾಷ್ಟ್ರ ಲಾಂಛನ.

**3. ಲಾಂಛನದ ಅನುಚಿತ ಬಳಕೆಯ ನಿಷೇಧ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾರೇ ವ್ಯಕ್ತಿಯು ಕೇಂದ್ರ ಸರ್ಕಾರದ ಅಥವಾ ಆ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಅದರ ಅಧಿಕಾರಿಯ ಪೂರ್ವ ಅನುಮತಿಯಿಲ್ಲದೆ, ಲಾಂಛನವು ಸರ್ಕಾರಕ್ಕೆ ಸಂಬಂಧಿಸಿದೆಯೆಂಬ ಅಥವಾ ಕೇಂದ್ರ ಸರ್ಕಾರದ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರದ ಅಧಿಕೃತ ದಸ್ತಾವೇಜೆಂಬ ಭಾವನೆ ಯಾವುದೇ ರೀತಿಯಲ್ಲಿ ಉಂಟಾಗುವಂತೆ ಅದನ್ನು ಬಳಸತಕ್ಕದ್ದಲ್ಲ ಅಥವಾ ಅದರ ಯಾವುದೇ ಕೃತಕ ಅನುಕರಣೆಯನ್ನು ಮಾಡತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ "ವ್ಯಕ್ತಿ" ಎಂಬುದು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಹಿಂದಿನ ಕಾರ್ಯ ನಿರ್ವಾಹಕನನ್ನು ಒಳಗೊಳ್ಳುತ್ತದೆ.

**4. ಅಕ್ರಮ ಲಾಭಕ್ಕಾಗಿ ಲಾಂಛನದ ಬಳಕೆಯ ನಿಷೇಧ.–** ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ಪ್ರಕರಣಗಳಲ್ಲಿ ಮತ್ತು ಅಂಥ ಷರತ್ತುಗಳನ್ನು ಹೊರತುಪಡಿಸಿ, ಯಾವುದೇ ವ್ಯಾಪಾರ, ವ್ಯವಹಾರ, ಆಜೀವಿಕೆ ಅಥವಾ ವೃತ್ತಿಯ ಉದ್ದೇಶಕ್ಕಾಗಿ ಅಥವಾ ಯಾವುದೇ ಪೇಟೆಂಟ್‌ನ ಹಕ್ಕು ಸ್ವಾಮ್ಯದಲ್ಲಿ ಅಥವಾ ಯಾವುದೇ ವ್ಯಾಪಾರ ಚಿಹ್ನೆಯಲ್ಲಿ ಅಥವಾ ವಿನ್ಯಾಸದಲ್ಲಿ ಲಾಂಛನವನ್ನು ಬಳಸತಕ್ಕದ್ದಲ್ಲ.

**5. ಕೆಲವು ಕಂಪನಿ, ಮುಂತಾದವುಗಳ ನೋಂದಣಿ ನಿಷೇಧ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವುದೇ ಸಕ್ಷಮ ಪ್ರಾಧಿಕಾರವು,–

(ಎ) ಲಾಂಛನವನ್ನು ಹೊಂದಿರುವ ವ್ಯಾಪಾರ ಚಿಹ್ನೆಯ ಅಥವಾ ವಿನ್ಯಾಸದ ನೋಂದಣಿ ಮಾಡತಕ್ಕದ್ದಲ್ಲ; ಅಥವಾ

(ಬಿ) ಆವಿಷ್ಕಾರದ ಸಂಬಂಧದಲ್ಲಿ ಲಾಂಛನವನ್ನು ಒಳಗೊಂಡಿರುವ ಹಕ್ಕು ಸ್ವಾಮ್ಯಕ್ಕೆ ಪೇಟೆಂಟ್ ಮಂಜೂರು ಮಾಡತಕ್ಕದ್ದಲ್ಲ.

(2) ಯಾವುದೇ ಲಾಂಛನವು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಲಾಂಛನವಾಗಿದೆಯೋ ಅಥವಾ ಅದರ ಕೃತಕ ಅನುಕರಣೆಯಾಗಿದೆಯೇ ಎಂಬ ಬಗ್ಗೆ ಸಕ್ಷಮ ಪ್ರಾಧಿಕಾರದ ಮುಂದೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ಸಕ್ಷಮ ಪ್ರಾಧಿಕಾರವು ಕೇಂದ್ರ ಸರ್ಕಾರಕ್ಕೆ ಉಲ್ಲೇಖಿಸತಕ್ಕದ್ದು ಮತ್ತು ಆ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**6. ಲಾಂಛನದ ಬಳಕೆಯನ್ನು ವಿನಿಯಮಿಸಲು ಕೇಂದ್ರ ಸರ್ಕಾರದ ಸಾಮಾನ್ಯ ಅಧಿಕಾರಗಳು.–** (1) ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಕಚೇರಿಗಳಲ್ಲಿ ಮತ್ತು ವಿದೇಶದಲ್ಲಿರುವ ರಾಜತಾಂತ್ರಿಕ ಮಿಷನ್‌ಗಳೂ ಸೇರಿದಂತೆ ಅವುಗಳ ಸಂಘಟನೆಗಳಲ್ಲಿ ಗೊತ್ತುಪಡಿಸಬಹುದಾದಂತಹ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಬಳಸಲಾಗುತ್ತಿರುವ ಅಧಿಕೃತ ಮುದ್ರೆಯಲ್ಲಿ ಲಾಂಛನದ ಬಳಕೆಯನ್ನು ವಿನಿಯಮಿಸುವುದು ಅವಶ್ಯವಾಗಿದೆ ಎಂದು ತನಗೆ ಕಂಡುಬರುವಂಥ ಉಪಬಂಧವನ್ನು ನಿಯಮಗಳ ಮೂಲಕ ಕೇಂದ್ರ ಸರ್ಕಾರವು ಕಲ್ಪಿಸಬಹುದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಕೇಂದ್ರ ಸರ್ಕಾರವು, ಈ ಮುಂದಿನವುಗಳನ್ನು ಮಾಡಲು ಅಧಿಕಾರಗಳನ್ನು ಹೊಂದಿರತಕ್ಕದ್ದು,–

(ಎ) ಸಂವಿಧಾನಾತ್ಮಕ ಪ್ರಾಧಿಕಾರಿಗಳು, ಸಚಿವರು, ಸಂಸತ್ತಿನ ಸದಸ್ಯರು, ವಿಧಾನ ಮಂಡಲಗಳ ಸದಸ್ಯರು, ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಲೇಖನ ಸಾಮಗ್ರಿ ಮೇಲೆ ಲಾಂಛನ ಬಳಸುವುದನ್ನು, ಅರೆ ಸರ್ಕಾರಿ ಲೇಖನ ಸಾಮಗ್ರಿ ಮೇಲೆ ಅದನ್ನು ಮುದ್ರಿಸುವ ಅಥವಾ ಉಬ್ಬಚ್ಚು ಮಾಡುವ ವಿಧಾನವನ್ನು ಅಧಿಸೂಚಿಸುವುದು;

(ಬಿ) ಲಾಂಛನವನ್ನು ಒಳಗೊಂಡಿರುವ ಅಧಿಕೃತ ಮುದ್ರೆಯ ವಿನ್ಯಾಸವನ್ನು ನಿರ್ದಿಷ್ಟಪಡಿಸುವುದು;

(ಸಿ) ಸಂವಿಧಾನಿಕ ಪ್ರಾಧಿಕಾರಗಳ, ವಿದೇಶೀ ಗಣ್ಯರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರ ವಾಹನಗಳ ಮೇಲೆ ಲಾಂಛನ ಪ್ರದರ್ಶಿಸುವುದನ್ನು ನಿರ್ಬಂಧಿಸುವುದು;

(ಡಿ) ಭಾರತದಲ್ಲಿನ ಸಾರ್ವಜನಿಕ ಕಟ್ಟಡಗಳ ಮೇಲೆ, ರಾಜತಾಂತ್ರಿಕ ಮಿಷನ್‌ಗಳ ಮೇಲೆ ಮತ್ತು ವಿದೇಶದಲ್ಲಿನ ಭಾರತದ ರಾಯಭಾರಿ ಕಟ್ಟಡಗಳ ಮೇಲೆ ಲಾಂಛನ ಪ್ರದರ್ಶನಕ್ಕಾಗಿ ಮಾರ್ಗಸೂಚಿಗಳನ್ನು ರೂಪಿಸುವುದು;

(ಇ) ಶೈಕ್ಷಣಿಕ ಉದ್ದೇಶಗಳಿಗಾಗಿ ಮತ್ತು ಸಶಸ್ತ್ರ ಪಡೆಗಳ ಸಿಬ್ಬಂದಿಗಾಗಿ ಬಳಸುವುದೂ ಸೇರಿದಂತೆ ಬೇರೆ ಬೇರೆ ಇತರ ಉದ್ದೇಶಗಳಿಗಾಗಿ ಲಾಂಛನವನ್ನು ಬಳಸುವುದಕ್ಕಾಗಿ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು;

(ಎಫ್) ಕೇಂದ್ರ ಸರ್ಕಾರವು, ಮೇಲೆ ಹೇಳಲಾದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಅವಶ್ಯಕ ಅಥವಾ ವಿಹಿತವೆಂದು ಪರಿಗಣಿಸುವಂತಹ (ಲಾಂಛನದ ವಿನ್ಯಾಸದ ವಿಶಿಷ್ಟ ವಿವರಣೆ ಮತ್ತು ಅದರ ಯಾವುದೇ ರೀತಿಯ ಬಳಕೆಯನ್ನು ಒಳಗೊಂಡಂತೆ) ಎಲ್ಲಾ ಕಾರ್ಯಗಳನ್ನು ಮಾಡುವುದು.

**7. ದಂಡನೆ.–** (1) 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಅಥವಾ ಈ ಪ್ರಕರಣದ ಮೇರೆಗಿನ ಅಪರಾಧದ ಅಪರಾಧಿಯೆಂದು ಈ ಹಿಂದೆಯೇ ನಿರ್ಣಿತನಾಗಿದ್ದು ಪುನಃ ಯಾವುದೇ ಅಂಥ ಅಪರಾಧದ ಅಪರಾಧಿಯೆಂದು ನಿರ್ಣಿತನಾದರೆ, ಅವನು ಎರಡನೇ ಮತ್ತು ತರುವಾಯದ ಪ್ರತಿಯೊಂದು ಅಪರಾಧಕ್ಕಾಗಿ ಆರು ತಿಂಗಳಿಗೆ ಕಡಿಮೆಯಿರದ ಆದರೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವುದೇ ಅಕ್ರಮ ಗಳಿಕೆಗಾಗಿ 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಂಥ ಅಪರಾಧಕ್ಕಾಗಿ ಆರು ತಿಂಗಳಿಗೆ ಕಡಿಮೆಯಿರದ ಆದರೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**8. ಪ್ರಾಸಿಕ್ಯೂಷನ್ ಹೂಡಲು ಪೂರ್ವಮಂಜೂರಾತಿ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಪ್ರಾಸಿಕ್ಯೂಷನನ್ನು, ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ಅಧಿಕೃತಗೊಂಡ ಯಾರೇ ಅಧಿಕಾರಿಯ ಪೂರ್ವ ಅನುಮತಿ ಪಡೆಯದೆ ಹೂಡತಕ್ಕದ್ದಲ್ಲ.

**9. ಉಳಿಸುವಿಕೆಗಳು.–** ಈ ಅಧಿನಿಯಮದಲ್ಲಿರುವುದು ಯಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಯಾರೇ ವ್ಯಕ್ತಿಯ ವಿರುದ್ಧ ಹೂಡಬಹುದಾದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳಿಂದ ಅವನಿಗೆ ವಿನಾಯಿತಿ ನೀಡತಕ್ಕದ್ದಲ್ಲ.

**10. ಅಧಿನಿಯಮವು ಅಧ್ಯಾರೋಹಿ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವು ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಅಂಥ ಅಧಿನಿಯಮಿತಿಯ ಕಾರಣದಿಂದ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಅವುಗಳಿಗೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು.

**11. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ ಮೇರೆಗೆ ಲಾಂಛನದ ಬಳಕೆಯನ್ನು ವಿನಿಯಮಿಸುವ ಪ್ರಕರಣಗಳು ಮತ್ತು ಷರತ್ತುಗಳು;

(ಬಿ) 6ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಅಧಿಕೃತ ಮುದ್ರೆಯಲ್ಲಿ ಲಾಂಛನದ ಬಳಕೆಯನ್ನು ವಿನಿಯಮಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಿರ್ಬಂಧಗಳನ್ನು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸುವುದಕ್ಕೆ ನಿಯಮಗಳನ್ನು ರಚಿಸುವುದು.

(ಸಿ) 6ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಲೇಖನ ಸಾಮಗ್ರಿಗಳ ಮೇಲೆ ಲಾಂಛನದ ಬಳಕೆ, ಲಾಂಛನವನ್ನೊಳಗೊಂಡಿರುವ ಅಧಿಕೃತ ಮೊಹರಿನ ವಿನ್ಯಾಸ ಮತ್ತು ಇತರ ವಿಷಯಗಳು.

(ಡಿ) 8ನೇ ಪ್ರಕರಣದ ಮೇರೆಗೆ ಪ್ರಾಷಿಕ್ಯೂಷನ್ ಹೂಡುವುದಕ್ಕಾಗಿ ಪೂರ್ವ ಮಂಜೂರಾತಿ ನೀಡಲು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರಿಯನ್ನು ಅಧಿಕೃತಗೊಳಿಸುವುದು; ಮತ್ತು

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಿಗೆ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಯಾವುದೇ ಅಂಥ ಮಾರ್ಪಾಟು ಅಥವಾ ರದ್ಧಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**ಅನುಸೂಚಿ**
**(ಪ್ರಕರಣ 2(ಬಿ) ನೋಡಿ)**

**<u>ಭಾರತದ ರಾಷ್ಟ್ರ ಲಾಂಛನದ ವಿವರಣೆ ಮತ್ತು ವಿನ್ಯಾಸ</u>**

ಭಾರತದ ರಾಷ್ಟ್ರ ಲಾಂಛನವನ್ನು, ಸಾರಾನಾಥ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟ ಅಶೋಕನ ಸಾರಾನಾಥ ಸಿಂಹ ಸ್ತಂಭದಿಂದ ತೆಗೆದುಕೊಳ್ಳಲಾಗಿದೆ. ಸಿಂಹ ಸ್ತಂಭವು ಸ್ತಂಭದ ಮೇಲ್ಭಾಗದಲ್ಲಿರುವ ವೃತ್ತಾಕಾರದ ಶೀರ್ಷ ಫಲಕದ ಮೇಲೆ ಬೆನ್ನಿಗೆ ಬೆನ್ನು ಕೂಡಿಕೊಂಡಂತೆ ನಾಲ್ಕು ಸಿಂಹಗಳ ಮುಖಗಳಿವೆ. ಶೀರ್ಷ ಫಲಕದ ಅಲಂಕರಣ ಪಟ್ಟಿಯ ಮೇಲೆ ಉಬ್ಬು ಚಿತ್ರಣದಲ್ಲಿರುವ ಒಂದು ಆನೆ, ಒಂದು ನಾಗಾಲೋಟದ ಕುದುರೆ, ಒಂದು ಗೂಳಿ ಮತ್ತು ಒಂದು ಸಿಂಹ, ಇವುಗಳನ್ನು ಕೆತ್ತುವ ಮೂಲಕ ಸಿಂಗರಿಸಲಾಗಿದೆ. ಇವುಗಳನ್ನು ಧರ್ಮಚಕ್ರದಿಂದ ಪ್ರತ್ಯೇಕಗೊಳಿಸಲಾಗಿದೆ. ಶೀರ್ಷಫಲಕವನ್ನು ಗಂಟೆಯಾಕಾರದ ಕಮಲದ ಮೇಲೆ ಕೂಡಿಸಲಾಗಿದೆ.

ಮಧ್ಯೆ ಧರ್ಮಚಕ್ರ ಇರುವ ಮೂರು ಸಿಂಹಗಳನ್ನು ಶೀರ್ಷಫಲಕದ ಮೇಲೆ ಇರುವಂತೆ ಕಾಣುವ ಸಿಂಹ ಸ್ತಂಭದ ಬಲಕ್ಕೆ ಗೂಳಿ, ಎಡಕ್ಕೆ ನಾಗಾಲೋಟದಲ್ಲಿರುವ ಒಂದು ಕುದುರೆ ಮತ್ತು ತೀರಾ ಬಲಕ್ಕೆ ಹಾಗೂ ತೀರಾ ಎಡಕ್ಕೆ ಧರ್ಮಚಕ್ರಗಳು ಕಾಣುವಂತೆ ಇರುವ ಪಾರ್ಶ್ವ ಚಿತ್ರವನ್ನು ಭಾರತದ ರಾಷ್ಟ್ರ ಲಾಂಛನವಾಗಿ ಅಳವಡಿಸಿಕೊಳ್ಳಲಾಗಿದೆ. ಗಂಟೆಯಾಕಾರದ ಕಮಲವನ್ನು ಬಿಟ್ಟುಬಿಡಲಾಗಿದೆ.

ಸಿಂಹ ಸ್ತಂಭದ ಪಾರ್ಶ್ವ ಭಾಗದ ಕೆಳಗಡೆ ದೇವನಾಗರಿ ಲಿಪಿಯಲ್ಲಿ ಬರೆದಿರುವ "ಸತ್ಯಮೇವ ಜಯತೆ" ಸತ್ಯಕ್ಕೆ ಮಾತ್ರ ಜಯ ಎಂಬ ಧ್ಯೇಯವಾಕ್ಯವು, ಭಾರತದ ರಾಷ್ಟ್ರ ಲಾಂಛನದ ಒಂದು ಭಾಗವಾಗಿದೆ.

ಭಾರತದ ರಾಷ್ಟ್ರ ಲಾಂಛನವು ಪರಿಶಿಷ್ಟ –I ಅಥವಾ ಪರಿಶಿಷ್ಟ– II ರಲ್ಲಿ ನೀಡಿರುವ ವಿನ್ಯಾಸಗಳಿಗೆ ಅನುಗುಣವಾಗಿರತಕ್ಕದ್ದು.

**ಪರಿಶಿಷ್ಟ – I**




**ಟಿಪ್ಪಣಿ:–** ಈ ವಿನ್ಯಾಸವು ಸರಳವಾಗಿದೆ ಮತ್ತು ಚಿಕ್ಕದಾಗಿ ಮಾಡಿಕೊಳ್ಳಲು ಅಂದರೆ, ಲೇಖನ ಸಾಮಗ್ರಿ, ಮೊಹರುಗಳು ಮತ್ತು ಬಣ್ಣದ ಮುದ್ರಣಗಳಲ್ಲಿ ಅಳವಡಿಸಿಕೊಳ್ಳಲು ಮಾಡಲಾಗಿದೆ.

## ಪರಿಶಿಷ್ಟ – II




**ಟಿಪ್ಪಣಿ:** ಈ ವಿನ್ಯಾಸವು ಹೆಚ್ಚು ವಿವರವಾಗಿದೆ ಮತ್ತು ದೊಡ್ಡ ಆಕಾರಗಳಲ್ಲಿ ಮಾಡಲು ಗೊತ್ತುಪಡಿಸಲಾಗಿದೆ.

* * *

Govt. Press, Bangalore, P7, W.D: 283 P7 , Copies: 150